# ಭೂತಾನ್‌ಗೆ ವಿದೇಶಾಂಗ ಕಾರ್ಯದರ್ಶಿ ಭೇಟಿ (ಜುಲೈ 19-20, 2024)

ಜುಲೈ 18, 2024

ವಿದೇಶಾಂಗ ಕಾರ್ಯದರ್ಶಿ ಶ್ರೀ ವಿಕ್ರಮ್ ಮಿಸ್ರಿ ಅವರು 2024ರ ಜುಲೈ 19-20ರಂದು ಭೂತಾನ್‌ಗೆ ಅಧಿಕೃತ ಭೇಟಿ ನೀಡಲಿದ್ದಾರೆ. ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಅವರು ಕೈಗೊಳ್ಳುತ್ತಿರುವ ಮೊದಲ ವಿದೇಶ ಪ್ರವಾಸ ಇದಾಗಿದೆ.

2. ಈ ಭೇಟಿಯ ಸಂದರ್ಭದಲ್ಲಿ, ವಿದೇಶಾಂಗ ಕಾರ್ಯದರ್ಶಿ ಮಿಸ್ರಿ ಅವರು ಭೂತಾನ್‌ನ ಗೌರವಾನ್ವಿತ ದೊರೆಯೊಂದಿಗೆ ಮಾತುಕತೆ ನಡೆಸಲಿದ್ದಾರೆ. ಅಷ್ಟೇ ಅಲ್ಲದೆ, ಭೂತಾನ್ ಪ್ರಧಾನಮಂತ್ರಿ, ವಿದೇಶಾಂಗ ವ್ಯವಹಾರಗಳು ಮತ್ತು ವಿದೇಶಾಂಗ ವ್ಯಾಪಾರ ಸಚಿವರೊಂದಿಗೂ ಅವರು ಮಾತುಕತೆ ನಡೆಸಲಿದ್ದಾರೆ. ಭೂತಾನ್ ಸರ್ಕಾರದ ವಿದೇಶಾಂಗ ಕಾರ್ಯದರ್ಶಿ ಮತ್ತು ಇತರೆ ಹಿರಿಯ ಅಧಿಕಾರಿಗಳನ್ನೂ ಅವರು ಭೇಟಿಯಾಗಲಿದ್ದಾರೆ. ಉಭಯ ವಿದೇಶಾಂಗ ಕಾರ್ಯದರ್ಶಿಗಳು ಭಾರತ-ಭೂತಾನ್ ಅಭಿವೃದ್ಧಿ ಸಹಕಾರ ಮಾತುಕತೆಯ (ಯೋಜನಾ ಮಾತುಕತೆ) ಸಹ-ಅಧ್ಯಕ್ಷತೆಯನ್ನೂ ವಹಿಸಲಿದ್ದಾರೆ.

3. ಭಾರತ ಮತ್ತು ಭೂತಾನ್ ನಡುವಿನ ನಿಯಮಿತ ಉನ್ನತ-ಮಟ್ಟದ ವಿನಿಮಗಳ ಸಂಪ್ರದಾಯಕ್ಕೆ ಅನುಗುಣವಾಗಿ ಈ ಭೇಟಿಯು ನಡೆಯಲಿದೆ. ಮತ್ತು ಭಾರತ ಸರ್ಕಾರವು ತನ್ನ 'ನೆರೆಹೊರೆಯವರೇ ಮೊದಲು' ನೀತಿಗೆ ನೀಡುವ ಉನ್ನತ ಆದ್ಯತೆಯನ್ನೂ ಇದು ಒತ್ತಿ ಹೇಳಲಿದೆ.

**ನವದೆಹಲಿ,**
**ಜುಲೈ 18, 2024**